ಪಿ.ಡಬ್ಲ್ಯೂ:1

**ಸಾಕ್ಷಿಯನ್ನು ಇಂದು ದಿನಾಂಕಃ 29-12-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನಾನು 7 ನೇ ತರಗತಿಯವರೆಗೆ ಶಾಲೆ ಕಲಿತಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಪ್ರಸ್ತುತ ಪ್ರಕರಣವನ್ನು ನನ್ನ ಇಬ್ಬರ ಮಕ್ಕಳವಿರುದ್ದ ಪೋಟಗಿಬೇಕೆಂದು ಹಾಕಿರುತ್ತೇನೆ. ಸುಮಿತ್ರ ನನ್ನ ಹೆಂಡತಿ ಎಂದರೆ ಹೌದು. ನನ್ನ ಮತ್ತು ಸುಮಿತ್ರರವರ ಮದುವೆಯಾಗಿ ಅಂದಾಜು 50 ವರ್ಷಗಳು ಆಗಿವೆ. ನನಗೆ ಈಗ ಅಂದಾಜು 75 ವರ್ಷ ವಯಸ್ಸು. ನನ್ನ ಹೆಂಡತಿಗೆ ಅಂದಾಜು 60 ವರ್ಷ ವಯಸ್ಸು ಆಗಿರಬಹುದು. ನಮಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಸದರಿಯವರ ಹೆಸರು ಶ್ರೀಕಾಂತ ಗೊಂದಕರ, ರೂಪಾ ಗುಣವಂತ ಗೊಂದಕರ ಇವಳ ಮದುವೆ ಆಗಿರುತ್ತದೆ, ಅಕ್ಷತಾ ಗುಣವಂತ ಗೊಂದಕರ ಮತ್ತು ಸಂತೋಷ ಗೊಂದಕರ . ಅಕ್ಷತಾ ಗೊಂದಕರ ಇವಳ ಮದುವೆ ಆಗಿರುವುದಿಲ್ಲ, ಮನೆಯಲ್ಲಿಯೇ ಇದ್ದಾಳೆ ಎಂದರೆ ಹೌದು. ಸದರಿ ಅಕ್ಷತಾಳಿಗೆ ಈಗ 35 ರಿಂದ 40 ವರ್ಷ ವಯಸ್ಸು ಎಂದರೆ ಸಾಕ್ಷಿಯು ಅಂದಾಜು 25 ವರ್ಷ ವಯಸ್ಸು ಎಂದು ನುಡಿಯುತ್ತಾರೆ. ಅಕ್ಷತಾರವರಿಗೆ ಹುಟ್ಟಿದಾಗಿನಿಂದ ಪಿಟ್ಸ್ ರೋಗ ಇದ್ದು , ಅವಳಿಗೆ ಒಂದು ಸಾರಿ ಪಿಟ್ಸ್ ಬಂದರೆ 2 ರಿಂದ 3 ತಾಸುಗಳ ವರೆಗೆ ಅವಳಿಗೆ ಪ್ರಜ್ಞೆ ಇರುವುದಿಲ್ಲ ಎಂದರೆ ಹೌದು. ನಾನು ಈಗ ಯಾವುದೇ ಕೆಲಸವನ್ನು ಮಾಡುವುದಿಲ್ಲ ಕಾರಣ ನನಗೆ ಕೆಲಸ ಮಾಡುವ ಶಕ್ತಿ ಇರುವುದಿಲ್ಲ. ನಾನು ಲಾಕಡೌನ್ ಬಂದಾಗಿನಿಂದ ಉದ್ಯೋಗವನ್ನು ಬಿಟ್ಟಿರುತ್ತೇನೆ. ಸದರಿ ಅಕ್ಷತಾಳಿಗೆ ಪಿಟ್ಸ್ ಇರುವುದರಿಂದ ಅವಳಿಗೆ ಪ್ರತಿತಿಂಗಳು ರೂ.5000/- ಚಿಕಿತ್ಸೆ ಖರ್ಚುಗಳಿದ್ದು ಸದರಿ ಖರ್ಚನ್ನು ಎದುರುದಾರರು ಮಾಡುತ್ತಾರೆ ಎಂದರೆ ಹೌದು. ಸಾಕ್ಷಿ ಮುಂದುವರೆದು ನಾವು ಸಹ ಇಲ್ಲಿಯವರೆಗೆ ಮಾಡುತ್ತಾ ಬಂದಿದ್ದೇವೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿಯಾದ ಸುಮಿತ್ರಾಗೆ ಹೈ ಬಿಪಿ ಮತ್ತು ಹೈ ಶುಗರ್ ಇದ್ದ ಕಾರಣ ಅವರಿಗೆ ಪ್ರತಿತಿಂಗಳು ರೂ.3000/- ಖರ್ಚು ಇದ್ದ ಕಾರಣ ಸದರಿ ಖರ್ಚನ್ನು ಸಹ ಎದುರುದಾರರು ನೋಡಿಕೊಳ್ಳುತ್ತಾರೆ ಎಂದರೆ ಹೌದು. ಸಾಕ್ಷಿಯು ಮುಂದುವರೆದು ನನಗೆ ಖರ್ಚು ಕೊಡಲುಯಾರು ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಎರಡು ಛಾಯಾಚಿತ್ರಗಳನ್ನು ತೋರಿಸಿ ನನಗೆ ಇವತ್ತಿಗೂ ದುಡಿಯಲು ಶಕ್ತಿ ಇದ್ದು ನಾನು ಸದರಿ ಛಾಯಾಚಿತ್ರಗಳಲ್ಲಿ ತೋರಿಸಿದಂತೆ ಸಂತೆಗಳಲ್ಲಿ ಅಂಗಡಿ ಇಟ್ಟು ವ್ಯಾಪಾರ ಮಾಡುತ್ತೇನೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

2. ನನಗೆ ವೃದ್ದಾಪವೇತನ ಎಂದು ಪ್ರತಿತಿಂಗಳು ರೂ.1200/- ಬರುತ್ತದೆ ಎಂದರೆ ಹೌದು. ಸಾಕ್ಷಿಯು ಮುಂದುವರೆದು ನನಗೆ ಸದರಿ 1200 ರೂ ಸಾಲುವುದಿಲ್ಲ ಎಂದು ನುಡಿಯುತ್ತಾರೆ. ನಾನು ಎದುರುದಾರರ ಜೊತೆಗೆ ಇರುತ್ತಿದ್ದು, ನಾನು ಸದರಿ 1200/- ರೂ ಅನ್ನು ಖರ್ಚಿಗೆ ಇಟುಟ್ಟಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಎದುರುದಾರರ ಮನೆಯಲ್ಲಿ ಕಾಲು ಇಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಛಾಯಾಚಿತ್ರಗಳನ್ನು ತೋರಿಸಿ ಸದರಿ ಛಾಯಾಚಿತ್ರಗಳಲ್ಲಿ ಎದುರುದಾರರು , ಹೆಂಡತಿ ಜೊತೆಗೆ ನಿಂತಿರುತ್ತೇನೆ ಸಾಕ್ಷಿಯು ಸದರಿ ಛಾಯಾಚಿತ್ರಗಳನ್ನು ನೋಡಿ ನಿರಾಕರಿಸಿರುತ್ತಾರೆ. ಸುಜಾತಾ ಮಾಳಿ ಯಾರು ಎಂದು ನನಗೆ ಗೊತ್ತಿಲ್ಲ. ಈ ವಯಸ್ಸಿನಲ್ಲಿ ನಾನು ಸುಜಾತ ಮಾಳಿ ರವರ ಜೊತೆಗೆ ಅಕ್ರಮ ಸಂಬಂಧಹೊಂದಿದ್ದು , ಎದುರುದಾರರಿಂದ ಹಣವನ್ನು ಪಡೆದು ಸದರಿ ಸುಜಾತಾ ಇವರಿಗೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸುಜಾತಾ ರವರ ಆಧಾರಕಾರ್ಡ್ ರ ಪ್ರತಿಯನ್ನು ತೋರಿಸಿದ್ದು , ಸದರಿ ಆಧಾರಕಾರ್ಡ ನಲ್ಲಿ ಸುಜಾತ ಗುಣವಂತ ಗೊಂದಕರ ಇರುತ್ತದೆ ಎಂದರೆ ಸಾಕ್ಷಿಯು 1 ನೇ ಎದುರುದಾರನು ಸದರಿ ಆಧಾರಕಾರ್ಡನ್ನು ಖೊಟ್ಟಿಯಾಗಿ ಸೃಷ್ಟಿ ಮಾಡಿರುತ್ತಾರೆ ಎಂದುನುಡಿಯುತ್ತಾರೆ. ಸಾಕ್ಷಿಗೆ ಛಾಯಾಚಿತ್ರದ ಪ್ರತಿಯನ್ನು ತೋರಿಸಿದ್ದು ಸದರಿ ಛಾಯಾಚಿತ್ರದಲ್ಲಿ ಸುಜಾತ ಮತ್ತು ನಾನು ನಿಂತಿರುವುದಾಗಿ ಹೇಳಿದ್ದು , ಸಾಕ್ಷಿಯು ಸದರಿ ಛಾಯಾಾಚಿತ್ರವನ್ನು ನೋಡಿ ನಿರಾಕರಿಸಿರುತ್ತಾರೆ. ನಾನು ಎದುದಾರರ ಮನೆಯಲ್ಲಿ ಇದ್ದು ಊಟ ಮಾಡುತ್ತಿದ್ದು , ಸದರಿ ಸುಜಾತ ಇವಳಿಗೆ ಹಣ ಕೊಡುವುದಾಗಿ ಪ್ರಸ್ತುತ ಪ್ರಕಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

2012 ನೇ ಇಸವಿಯಲ್ಲಿಒಂದು ಅರಣ್ಯ ಪ್ರದೇಶದಲ್ಲಿ ಒಂದು ಜಾಗ ಪೂರ್ವ -ಪಶ್ಚಿಮ 33 ಅಡಿ ಮತ್ತು ಉತ್ತರ -ದಕ್ಷಿಣ 23 ಅಡಿ ಇದ್ದು ಸದರಿ ಜಾಗ ಇವತ್ತಿಗೂ ನನ್ನ ಹೆಸರಿಗೆ ಇದೆ ಎಂದರೆ ಹೌದು. ನಾನು ಸದರಿ ಜಾಗವನ್ನು ಸುಜಾತರವರ ಮೇಲೆ ಪ್ರೀತಿ ಇದ್ದ ಕಾರಣ ವಿಲ್ ಮುಖಾಂತರ ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಾಗವನ್ನು 15 ವರ್ಷಗಳ ಕಾಲ ಮಾರಾಟ ಮಾಡಬಾರದೆಂಬ ಷರತ್ತು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸುಜಾತ ಇವರಿಗೆ ವಿಲ್ ಮಾಡಿಕೊಟ್ಟಿದ್ದು ಎದುರುದಾರರು ಹಾಗೂ ಸಮಾಜ ಹಿರಿಯರು ನನಗೆ ಬುದ್ದಿಮಾತು ಹೇಳಿದ ನಂತರ ಸದರಿ ವಿಲ್ ಅನ್ನು ರದ್ದತಿಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ರದ್ದತಿ ಪತ್ರವನ್ನು ತೋರಿಸಿದ್ದು , ಸಾಕ್ಷಿಯು 1 ನೇ ಎದುರುದಾರನು ಸದರಿ ರದ್ದತಿಪತ್ರವನ್ನು ಖೊಟ್ಟಿಯಾಗಿ ಸೃಷ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಎದುರುದಾರನು ನನ್ನ ಮೇಲೆ ತುಂಬಾ ಪ್ರೀತಿ ಇದ್ದ ಕಾರಣ ನಾನು 1 ನೇ ಎದುರುದಾರನ ವಿರುದ್ದ ಖೊಟ್ಟಿ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಸದರಿ ಸುಜಾತ ಇವರು ವಿಧವಾವೇತನ ಪಡೆಯುತ್ತಿದ್ದ ಆದೇಶ ಎಂದು ಹೇಳಿದ್ದು , ಸಾಕ್ಷಿಯು ಅದನ್ನು ನೋಡಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಉಪವಿಭಾಗಾಧಿಕಾರಿ 2022 ನೇ ಇಸವಿಯಲ್ಲ ಎದುರುದಾರರು ನನ್ನನ್ನು ನೋಡಿಕೊಳ್ಳುವುದಾಗಿ ಅದರಿಂದ ನಾನು ಜೀವನಾಂಶ ಪಡೆಯುವುದು ಅವಶ್ಯಕತೆ ಇರುವುದಿಲ್ಲ ಎಂದು ಆದೇಶ ಮಾಡಿರುತ್ತಾರೆ ಎಂದರೆ ಹೌದು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಸದರಿ ಮನೆಗೆ ನಾನು ಹಾಗೂ ಸುಜಾತಾ ಇದ್ದೆವು ಎಂದರೆ ಸರಿಯಲ್ಲ. ಆಸಂಗಿಯಲ್ಲಿ ಮಗದುಮ್ ರವರ ಮನೆಯಲ್ಲಿ ನಾನು ಹಾಗೂ ಸುಜಾತ ಬಾಡಿಗೆ ಮನೆಯಲ್ಲಿ ಇದ್ದು ಸದರಿ ಬಾಡಿಗೆಯನ್ನು ಎದುರುದಾರರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಕಿವಿಯ ಓಲೆ , ತಾಳಿ ಮತ್ತು ಕಾಲುಚೈನು ಸುಜಾತ ಇವರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಕ್ಷತಾ ಇವಳಿಗೆ ಎದುರುದಾರರು ಅರ್ಧ ತೊಲೆ ಚೈನನ್ನು ಮಾಡಿಸಿಕೊಟ್ಟಿಟದ್ದು ಸದರಿ ಚೈನನ್ನು ಸಹ ನಾನು ಸುಜಾತ ಇವರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಎಡಗಣ್ಣಿನ ಶಸ್ತ್ರ ಚಿಕಿತ್ಸೆಯಾಗಿ 10 ವರ್ಷ ಆಗಿರುತ್ತದೆ ಮತ್ತು ಬಲಗಣ್ಣಿನ ಶಸ್ತ್ರ ಚಿಕಿತ್ಸೆ ಯಾಗಿ 1 ವರ್ಷ ಅಗಿರುತ್ತದೆ, ಆದರೆ ನನ್ನ ಖರ್ಚಿಗೆ ಹಣ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಎದುರುದಾರರು ಸದರಿ ಚಿಕಿತ್ಸೆಯ ವೆಚ್ಚನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎಡಗಣ್ಣಿನ ಶಸ್ತ್ರ ಚಿಕಿತ್ಸೆಗಾಗಿ ಯಾರು ಹಣ ಕೊಟ್ಟಿರುವುದಿಲ್ಲ, ಬಲಗಣ್ಣಿನ ಶಸ್ತ್ರ ಚಿಕಿತ್ಸೆಗಾಗಿ 2 ನೇ ಎದುರುದಾರನು ಹಣ ಕೊಟ್ಟಿರುತ್ತಾನೆ. ನನ್ನ ಬಲಗಣ್ಣಿನ ಶಸ್ತ್ರ ಚಿಕಿತ್ತೆಗೆ ರೂ. 50000/- ಆಗಿದ್ದು , ಸದರಿ 50000/- ಅರ್ಧ ಅರ್ಧ ದಂತೆ 1 ಮತ್ತು 2 ನೇ ಅರ್ಜಿದಾರರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

4. ಪ್ರಸ್ತುತ ಪ್ರಕರಣದ ಮಾಹಿತಿಯನ್ನು ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ನಾನು ಮಕ್ಕಳ ಶಿಕ್ಷಣವನ್ನು ಮತ್ತು ಮದುವೆಯನ್ನು ನನ್ನ ಸ್ವಂತ ಖರ್ಚಿನಿಂದ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರನು 10 ವರ್ಷ ವಯಸ್ಸಿನವರು ಇದ್ದಾಗ ನೇಕಾರಿಗೆ ಮಾಡುತ್ತಾ ಶಾಲೆಯನ್ನು ಕಲಿತಿರುತ್ತಾನೆ ಎಂದರೆ ಸರಿಯಲ್ಲ. ನಮ್ಮ ಮನೆತನಕ್ಕೆ ಯಾವುದೇ ಆಸ್ತಿ ಇರುವುದಿಲ್ಲ. 1 ನೇ ಎದುರುದಾರನ ಹೆಸರಿಗೆ 2 ಎಕರೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ಎದುರುದಾರನು ಜಮೀನು ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ , ಕಾರಣ 1 ನೇ ಎದುರುದಾರನು ನನಗೆ ಕೇವಲ ಖರೀದಿ ಮಾಡಿರುವುದಾಗಿ ಹೇಳಿರುತ್ತಾನೆ. 1 ನೇ ಎದುರುದಾರನು ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಬೇಗೆ ಮೊಬೈಲ್ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದು ಪ್ರತಿತಿಂಗಳು ರೂ.4000/- ಆದಾಯ ಇರುತ್ತದೆ ಎಂದರೆ ಸಾಕ್ಷಿಯು ಎದುರುದಾರರು ತನ್ನ ಸ್ವಂತ ಮೊಬೈಲ್ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದು ಅವರ ಕೆಳಗೆ 10 ಜನ ಆಳು ಇದ್ದು , ಸದರಿ ಆಳುಗಳಿಗೆ ಪ್ರತಿ ದಿನ ರೂ.500/- ಅಂತೆ ಕೊಡುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರು ಸುಜಾತ ಇವರನ್ನು ಬಿಟ್ಟರೇ ನಿಮ್ಮನ್ನು ನೋಡಿ ಕೊಳ್ಳುತ್ತೇವೆ ಎಂದು ಹೇಳಿದ್ದು , ನಾನು ಸದರಿ ಸುಜಾತ ಇವರನ್ನು ಬಿಡುವುದಿಲ್ಲ ಅಂತ ಹೇಳಿರುತ್ತೇನೆ

ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ನಾನು ಎದುರುದಾರಿಗೆ 10 ಬಾರಿ ಠಾಣೆಯಲ್ಲಿ ಅರ್ಜಿ ಕೊಟ್ಟ , ಠಾಣೆಗೆ ಕರೆಯಿಸಿ ಕಿರುಕುಳ ನೀಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನಾನು ಸುಜಾತ ಇವರಿಗೆ ಆಸ್ತಿಯನ್ನು ಮಾರಾಟ ಮಾಡಬಾರದು ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ , ಬನಹಟ್ಟಿಯಲ್ಲಿ ದಾವೆಯನ್ನು ಹೂಡಿ ನನ್ನ ವಿರುದ್ದ ತಡೆಯಾಜ್ಞೆ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು , ಸದರಿ ತಡೆಯಾಜ್ಞೆ ಇದಿದ್ದರಿಂದ ನಾನು ನನ್ನ ಹೊಟ್ಟೆಯನ್ನು ಹೇಗೆ ತುಂಬಿಸಿಕೊಳ್ಳಬೇಕು ಎಂದು ನುಡಿಯುತ್ತಾರೆ. ಪೊಲೀಸರು ನನಗೆ ಬುದ್ದಿ ಮಾತು ಹೇಳಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ನಮೂದಿಸಿದ ಎರಡು ಆಸ್ತಿಗಳು ಎದುರುದಾರರು ದುಡಿದು ಸಂಪಾದನೆ ಮಾಡಿದ ಹಣದಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಮತ್ತು ನನ್ನ ಹೆಂಡತಿ ದುಡಿದು ಸಂಪಾದನೆ ಮಾಡಿ ಖರೀದಿ ಮಾಡಿದ ಆಸ್ತಿಗಳು ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು 2017 ನೇ ಇಸವಿಯಲ್ಲಿ ಆಸ್ತಿಗಳನ್ನು ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಅರಣ್ಯಪ್ರದೇಶದಲ್ಲಿ ಮಂಜೂರದ ಜಾಗೆಯಲ್ಲ್ಲಿ ಎದುರುದಾರರು ಮನೆಗೆ ಸ್ಲ್ಯಾಬ್ ಹಾಕಿ ಮನೆಯನ್ನು ಕಟ್ಟಿಕೊಟ್ಟಿರುತ್ತಾರ ಎಂದರೆ ಸಾಕ್ಷಿಯು ಸ್ಲ್ಯಾಬ್ ಎದುರುದಾರರು ಹಾಕಿರುತ್ತಾರೆ, ಆದರೆ ಮನೆಯನ್ನು ನಾನು ಕಟ್ಟಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ನಾನು ಎದುರುದಾರರ ಜೊತೆಗೆ ವಾಸಿಸುತ್ತೇನೆ ಎಂದರೆಸರಿಯಲ್ಲ. ಎದುರುದಾರರ ಮನೆಯಲ್ಲಿ ನಾನು ವಾಸಿಸುತ್ತಿದ್ದು ನನಗೆ ಜೀವನಾಂಶ ಅವಶ್ಯಕತೆ ಇರುವುದಿಲ್ಲ, ಸದರಿ ಪ್ರಕರಣದಲ್ಲಿ ಎದುರುದಾರರು ಕೊಡುವ ಹೆಚ್ಚಿನ ಹಣವನ್ನು ಪಡೆದು ಸುಜಾತ ಇವರಿಗೆ ಕೊಡಬೇಕೆಂಬ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 4 ತಿಂಗಳ ಹಿಂದೆ ಎದುರುದಾರರಿಂದ ಪ್ರತಿದಿನ ರೂ.500/- ಕೊಡಿಸುವುದಾಗಿ ಮತ್ತು ನನ್ನ ಹೆಸರಿಗೆ ಇದ್ದ ಆಸ್ತಿಯ ಉತಾರೆಯಲ್ಲಿ ಹೆಂಡತಿ ಮತ್ತು ಮಕ್ಕಳ ಹೆಸರನ್ನು ಸೇರಿಸುವ ಒಪ್ಪಂದ ಆಗಿತ್ತು ಎಂದರೆ ಸಾಕ್ಷಿಯು 1 ನೇ ಎದುರುದಾರರು ಸದರಿ ಒಪ್ಪಂದದ ಮಾತನ್ನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಈ ರೀತಿಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿದಿನ ರೂ.500/- ರಂತೆ ನಾನು ಎದುರುದಾರರಿಂದ ಹಣವನ್ನು 15 ದಿನಗಳ ಕಾಲ ಪಡೆದಿದ್ದು , ನಂತರ ನಾನು ಉಪನೋಂದಾಣಿ ಕಾರಿಗಳಕಚೇರಿಗೆ ಸಹಿ ಮಾಡಲು ಹೋಗದೇ ಇದ್ದ ಕಾರಣ ಎದುರುದಾರರರು ಹಣವನ್ನು ಕೊಡುವುದ್ನು ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೆ ಸರಿ ಅದೆ,**

**Sd/-**

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**

**ಬನಹಟ್ಟಿ.**